ಕರ್ನಾಟಕ ಸರ್ಕಾರ
ಕಾಲೇಜು ಶಿಕ್ಷಣ ಇಲಾಖೆ

ಸಂಖ್ಯೆ:ಕಾಶಿಇ/260/ಪಿಹೆಚ್‌ಡಿ/ಎಂಫಿಲ್/2016-17/ಸೇವಿ-1

ಕಾಲೇಜು ಶಿಕ್ಷಣ ಆಯುಕ್ತರ ಕಛೇರಿ,
ಬೆಂಗಳೂರು, ದಿನಾಂಕ:31-03-2022

## : ಸುತ್ತೋಲೆ :

**ವಿಷಯ:** ಸರ್ಕಾರಿ ಪ್ರಥಮ ದರ್ಜೆ ಕಾಲೇಜುಗಳ ಸಹ/ಸಹಾಯಕ ಪ್ರಾಧ್ಯಾಪಕರುಗಳಿಗೆ 2006ರ ಯುಜಿಸಿ ವೇತನ ಶ್ರೇಣಿಗಳಲ್ಲಿ ಪಿ.ಹೆಚ್.ಡಿ/ಎಂ.ಫಿಲ್ ಮುಂಗಡ ವೇತನ ಬಡ್ತಿಗಳನ್ನು ಮಂಜೂರು ಮಾಡುವ ಕುರಿತು.

**ಉಲ್ಲೇಖ:** ಸರ್ಕಾರದ ಪತ್ರ ಸಂಖ್ಯೆ: ಇಡಿ/190/ಡಿಸಿಇ/2021(ಇ-ಕಡತ), ದಿನಾಂಕ: 11-03-2022.

****

ಸೂಚಿತ ವಿಷಯಕ್ಕೆ ಸಂಬಂಧಿಸಿದಂತೆ ಉಲ್ಲೇಖಿತ ಸರ್ಕಾರದ ಪತ್ರದಲ್ಲಿ, ಸರ್ಕಾರಿ ಪ್ರಥಮ ದರ್ಜೆ ಕಾಲೇಜುಗಳ ಸಹ/ಸಹಾಯಕ ಪ್ರಾಧ್ಯಾಪಕರುಗಳಿಗೆ 2006ರ ಯುಜಿಸಿ ವೇತನ ಶ್ರೇಣಿಗಳಲ್ಲಿ ಪಿಹೆಚ್‌ಡಿ/ಎಂ.ಫಿಲ್ ಮುಂಗಡ ವೇತನ ಬಡ್ತಿಗಳ ಮಂಜೂರಾತಿ ಕುರಿತಂತೆ ಪಿ.ಹೆಚ್.ಡಿ ಪದವಿಯನ್ನು ಮಾತ್ರ ಪಡೆದು (ಎನ್‌ಇಟಿ/ಎಸ್‌ಎಲ್‌ಇಟಿ/ಎಂಫಿಲ್ ವಿದ್ಯಾರ್ಹತೆಗಳನ್ನು ಹೊಂದಿಲ್ಲದೆ) ನೇಮಕಾತಿ ಹೊಂದಿ ನಂತರ ಪಿ.ಹೆಚ್.ಡಿ ಮುಂಗಡ ವೇತನ ಬಡ್ತಿಗಳನ್ನು ಹಾಗೂ ಸ್ಥಾನೀಕರಣ ಸೌಲಭ್ಯಗಳನ್ನು(ಎರಡು ಸೌಲಭ್ಯವನ್ನು) ಪಡೆದುಕೊಂಡಿರುವ ಎಷ್ಟು ಪ್ರಾಧ್ಯಾಪಕರುಗಳು ಇದ್ದಾರೆ ಎಂಬ ಬಗ್ಗೆ ಸಂಪೂರ್ಣ ವಿವರಗಳನ್ನು ಸರ್ಕಾರಕ್ಕೆ ಸಲ್ಲಿಸುವಂತೆ ಸೂಚಿಸಿದ್ದು, ಈ ಕುರಿತು ಪರಿಶೀಲಿಸಿ ಈ ಸುತ್ತೋಲೆಯೊಂದಿಗೆ ಲಗತ್ತಿಸಿರುವ ನಮೂನೆಯಲ್ಲಿ ಪೂರ್ಣ ವಿವರಗಳೊಂದಿಗೆ ದಿನಾಂಕ:08-04-2022 ರೊಳಗೆ ಭರ್ತಿ ಮಾಡಿ ಈ ಕಛೇರಿಗೆ ಕಳುಹಿಸುವಂತೆ ಸೂಚಿಸಲಾಗಿದೆ.

31/03/2022

**ಮುಖ್ಯ ಆಡಳಿತಾಧಿಕಾರಿಗಳು**
**ಕಾಲೇಜು ಶಿಕ್ಷಣ ಇಲಾಖ**

**ಇವರಿಗೆ:**

1. ಪ್ರಾದೇಶಿಕ ಜಂಟಿ ನಿರ್ದೇಶಕರು, ಕಾಲೇಜು ಶಿಕ್ಷಣ ಇಲಾಖೆ, ಬೆಂಗಳೂರು, ಮೈಸೂರು, ಮಂಗಳೂರು, ಶಿವಮೊಗ್ಗ, ಧಾರವಾಡ ಮತ್ತು ಕಲಬುರಗಿ-ಮಾಹಿತಿ ಹಾಗೂ ಅಗತ್ಯ ಕ್ರಮಕ್ಕಾಗಿ.
2. ಎಲ್ಲಾ ಸರ್ಕಾರಿ ಪ್ರಥಮ ದರ್ಜೆ ಕಾಲೇಜುಗಳ ಪ್ರಾಂಶುಪಾಲರುಗಳಿಗೆ- ಮಾಹಿತಿ ಹಾಗೂ ತಮ್ಮ ಕಾಲೇಜಿನಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ ಬೋಧಕರುಗಳ ಪೂರ್ಣ ವಿವರಗಳನ್ನು ನಿಗದಿತ ನಮೂನೆಯಲ್ಲಿ ಭರ್ತಿ ಮಾಡಿ ಕಳುಹಿಸತಕ್ಕದ್ದು.
3. ಮೇಲೆ ತಿಳಿಸಿರುವ ಕಾಲೇಜುಗಳಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ ಸಂಬಂಧಪಟ್ಟ ಬೋಧಕರುಗಳು ತಮ್ಮ ಸೇವಾ ವಿವರಗಳನ್ನು ಪ್ರಾಂಶುಪಾಲರಿಗೆ ಸಕಾಲದಲ್ಲಿ ಒದಗಿಸತಕ್ಕದ್ದು.

4. ಮಾಹಿತಿ ಅಧಿಕಾರಿಗಳು, ಮಾಹಿತಿ ಮತ್ತು ತಂತ್ರಜ್ಞಾನ ವಿಭಾಗ, ಕೇಂದ್ರ ಕಛೇರಿ, ಬೆಂಗಳೂರು- ಇಲಾಖಾ ವೆಬ್‌ಸೈಟ್‌ನಲ್ಲಿ ಪ್ರಕಟಿಸುವ ಸಂಬಂಧದಲ್ಲಿ ಅಗತ್ಯ ಕ್ರಮಕ್ಕಾಗಿ.

**ಪ್ರತಿಯನ್ನು:**

1. ಮಾನ್ಯ ಆಯುಕ್ತರು/ನಿರ್ದೇಶಕರು/ಹೆಚ್ಚುವರಿ ನಿದೇಶಕರ ಆಪ್ತ ಶಾಖೆಗಳಿಗೆ, ಕೇಂದ್ರ ಕಛೇರಿ, ಕಾಲೇಜು ಶಿಕ್ಷಣ ಇಲಾಖೆ ಬೆಂಗಳೂರು.
2. ಕಛೇರಿ ಪ್ರತಿ.

## ನಮೂನೆ

### ಸರ್ಕಾರಿ ಪ್ರಥಮ ದರ್ಜೆ ಕಾಲೇಜುಗಳ ಸಹ/ಸಹಾಯಕ ಪ್ರಾಧ್ಯಾಪಕರುಗಳಿಗೆ 2006ರ ಯುಜಿಸಿ ವೇತನ ಶ್ರೇಣಿಗಳಲ್ಲಿ ಪಿ.ಹೆಚ್.ಡಿ/ಎಂ.ಫಿಲ್ ಪದವಿಗೆ ಮುಂಗಡ ವೇತನ ಬಡ್ತಿಗಳನ್ನು ಮತ್ತು ಸ್ಥಾನೀಕರಣದ ಸೇವಾವಿನಾಯಿತಿಯನ್ನು ಪಡೆದವರ ವಿವರಗಳು.

| ಕ್ರ.ಸಂ | ಕಾಲೇಜಿನ ಹೆಸರು & ಸ್ಥಳ | | ನೇಮಕಾತಿ ಹೊಂದಿರುವ ದಿನಾಂಕ | ನೇಮಕಾತಿ ದಿನಾಂಕದಂದು ಹೊಂದಿರುವ ವಿದ್ಯಾರ್ಹತೆ (ಪಿ.ಹೆಚ್‌ಡಿ/ ಎಂ.ಫಿಲ್ ಅಧಿಸೂಚನೆ/ ಪ್ರಮಾಣ ಪತ್ರದ ಪ್ರತಿ ಸಲ್ಲಿಸುವುದು) | ಪಿಹೆಚ್‌ಡಿ ಮತ್ತು ಎಂ.ಫಿಲ್ ಪದವಿಯನ್ನು ಮಾತ್ರ ಪಡೆದಿದ್ದು ಅದರ ಆಧಾರದ ಮೇಲೆ ಪಡೆದಿರುವ ಸೌಲಭ್ಯಗಳು | | | ಷರಾ |
|---|---|---|---|---|---|---|---|---|
| | ಅಧ್ಯಾಪಕರ ಹೆಸರು | ವಿಷಯ | | | ಮುಂಗಡ ವೇತನ ಬಡ್ತಿ ಮಂಜೂರಾತಿ ಆದೇಶ ಸಂಖ್ಯೆ & ದಿನಾಂಕ (ಪ್ರತಿ ಸಲ್ಲಿಸುವುದು) | ಸೇವಾ ವಿನಾಯಿತಿ ಯೊಂದಿಗೆ ಹಿರಿಯ ವೇತನ ಶ್ರೇಣಿ ಪಡೆದಿದ್ದಲ್ಲಿ ಸ್ಥಾನೀಕರಣ ಮಂಜೂರಾತಿ ಆದೇಶ ಸಂಖ್ಯೆ & ದಿನಾಂಕ (ಪ್ರತಿ ಸಲ್ಲಿಸುವುದು) | ಎರಡೂ ಸೌಲಭ್ಯ (ಪಡೆದಿರುವ/ ಪಡೆದಿಲ್ಲದಿರುವ ಬಗ್ಗೆ ಮಾಹಿತಿ) | |
| 1 | 2 | 3 | 4 | 5 | 6 | 7 | 8 | 9 |
| | | | | | | | | |

ಸಹಿ/-

ಸಂಬಂಧಪಟ್ಟ ಕಾಲೇಜುಗಳ ಪ್ರಾಂಶುಪಾಲರುಗಳು